KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 02/10/2019

## ಬಿಜೆಪಿಯವರ ಬಂಡವಾಳ ಬಯಲು ಮಾಡುವೆ ಎಂದ ಶಿವಕುಮಾರ್

# ಡಿಕೆಶಿಗೆ ಅ.15ರವರೆಗೆ ಜೈಲು ವಾಸ

ವಿ.ಕ 2-10-19

■ **ಶಿವಾನಂದ ಹಿರೇಮಠ** ಹೊಸದಿಲ್ಲಿ

ಅಕ್ರಮ ಹಣ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಡಿ.ಕೆ.ಶಿವಕುಮಾರ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಅ. 15ರವರೆಗೆ ವಿಸ್ತರಿಸಿದ ದಿಲ್ಲಿಯ ವಿಶೇಷ ನ್ಯಾಯಾಲಯ, ತಿಹಾರ್ ಜೈಲಿನಲ್ಲೇ ಇಡಿ ವಿಚಾರಣೆಗೆ ಅವಕಾಶ ಕಲ್ಪಿಸಿದೆ.

ಈ ನಡುವೆ "ನಾನೊಬ್ಬನೆ ತಪ್ಪೆಸಗಿಲ್ಲ, ಬಿಜೆಪಿ ನಾಯಕರ ಬಂಡವಾಳವನ್ನು ಬಯಲಿಗೆಳೆಯುತ್ತೇನೆ. ದ್ವೇಷದ ರಾಜಕಾರಣಕ್ಕೆ ನಾನು ಬಲಿಯಾಗಿದ್ದೇನೆ," ಎಂದು ಶಿವಕುಮಾರ್ ಕೋರ್ಟ್ ಹಾಲ್‌ನಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಹೇಳಿದ್ದಾರೆ.

ಈ ಮೊದಲು ಸೆ.4ರಿಂದ ಜಾರಿ ನಿರ್ದೇಶನಾಲಯ ಕಸ್ಟಡಿಯಲ್ಲಿ ವಿಚಾರಣೆ ಎದುರಿಸಿದ್ದ ಡಿಕೆಶಿ ಅವರನ್ನು ಸೆ. 17ರಂದು ದಿಲ್ಲಿಯ ವಿಶೇಷ ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಅ.1ರಂದು ಡಿಕೆಶಿ ನ್ಯಾಯಾಂಗ ಬಂಧನ ಅಂತ್ಯಗೊಂಡ ಹಿನ್ನೆಲೆಯಲ್ಲಿ ಅವರನ್ನು ಮಂಗಳವಾರ ದಿಲ್ಲಿಯ ರೌಸ್ ಅವೆನ್ಯೂ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ನ್ಯಾಯಾಂಗ ಬಂಧನ ಅವಧಿ ವಿಸ್ತರಣೆಗಾಗಿ ಇಡಿ ತನಿಖಾಧಿಕಾರಿಗಳು ಮನವಿ ಮಾಡಿದ್ದಲ್ಲದೆ, ಜಾರಿ ನಿರ್ದೇಶನಾಲಯ ಅಧಿಕಾರಿಗಳಿಂದ ವಿಚಾರಣೆಗಾಗಿ ಅವಕಾಶ ನೀಡಬೇಕೆಂದು ಇಡಿ ಪರ ವಕೀಲ ಅಮಿತ್ ಮಹಾಜನ್ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ನ್ಯಾಯಾಧೀಶ ಅಜಯ್ ಕುಮಾರ್ ಅವರು ಅ.4 ಮತ್ತು 5ರಂದು ಬೆಳಗ್ಗೆ 11ರಿಂದ 3 ಗಂಟೆಯವರೆಗೂ ಇಡಿ ವಿಚಾರಣೆ ನಡೆಸಲು ಅನುಮತಿ ನೀಡಿದರು.

ನ್ಯಾಯಾಂಗ ಬಂಧನದಲ್ಲಿರುವ ಶಿವಕುಮಾರ್‌ಗೆ ಓದಲು ಪುಸ್ತಕ ನೀಡಬೇಕು, ಅವರ ಪರ ವಕೀಲರನ್ನು ಮತ್ತು ಕುಟುಂಬಸ್ಥರನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಡಿಕೆಶಿ ಪರ ವಕೀಲ ದಯಾನ್ ಕೃಷ್ಣನ್ ಮನವಿ ಮಾಡಿದರು. ಅ. 4 ಮತ್ತು 5ರಂದು ಇಡಿ ವಿಚಾರಣೆ ನಂತರ ಮಧ್ಯಾಹ್ನ 3ರಿಂದ 5 ಗಂಟೆಯವರೆಗೂ ಡಿಕೆಶಿ ಅವರನ್ನು ಭೇಟಿ ಮಾಡಲು ಅವರ ಪರ ವಕೀಲರಿಗೆ ಕೋರ್ಟ್ ಅವಕಾಶ ಕಲ್ಪಿಸಿದೆ.

ಇಡಿ ಕಸ್ಟಡಿ ವೇಳೆ ಡಿಕೆಶಿ ಮೂರು ದಿನಗಳ ಕಾಲ ಆಸ್ಪತ್ರೆಗೆ ದಾಖಲಾಗಿದ್ದರಿಂದ ಅವರ ವಿಚಾರಣೆ ಸಾಧ್ಯವಾಗಿಲ್ಲ, ಆದ್ದರಿಂದ ತಿಹಾರ್ ಜೈಲಿನಲ್ಲಿಯೇ ಅವರನ್ನು ವಿಚಾರಣೆಗೆ ಒಳಪಡಿಸಲು ಅವಕಾಶ ಕಲ್ಪಿಸುವಂತೆ ಇಡಿ ಪರ ವಕೀಲರು ಮನವಿ ಮಾಡಿದರು. ಇಡಿ ಕೇಳುವ ಪ್ರಶ್ನೆಗಳನ್ನು ದಾಖಲಿಸಿಕೊಳ್ಳಲು ಡಿಕೆಶಿ ಪರ ವಕೀಲರು ಭೇಟಿಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು. ಡಿಕೆಶಿ ವಿಚಾರಣೆ ದಿನದಂದೇ ಅವರ ಪರ ವಕೀಲ ಭೇಟಿಗೆ ಕೋರ್ಟ್ ಅನುಮತಿ ನೀಡಿತು.





ಕನಕಪುರದ ಬಂಡೆ ಜಗ್ಗಲ್ಲ, ಬಗ್ಗಲ್ಲ, ಬಿಸಿಲು-ಮಳೆಗೂ ಅಲ್ಲಾಡಲ್ಲ, ದಿಲ್ಲಿ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ಹಾಕಿದ್ದೇವೆ. 14ರಂದು ವಿಚಾರಣೆ ಬರಲಿದೆ. ಹೈಕೋರ್ಟ್ ಆದೇಶದ ಆಧಾರದ ಮೇಲೆ ಮುಂದಿನ ಹೆಜ್ಜೆ ಇಡಲಿದ್ದೇವೆ. ಡಿಕೆಶಿ ಆತ್ಮಸ್ಥೈರ್ಯದಿಂದ ಇದ್ದಾರೆ. ಆರೋಪದಿಂದ ಮುಕ್ತಿ ಸಿಗಲಿದೆ.
– **ಡಿ.ಕೆ ಸುರೇಶ್** ಸಹೋದರ, ಸಂಸದ

### ಕಣ್ಣೀರಿಟ್ಟ ಬೆಂಬಲಿಗರು

ನ್ಯಾಯಾಂಗ ಬಂಧನ ವಿಸ್ತರಣೆ ಆಗುತ್ತಿದ್ದಂತೆ ಡಿಕೆಶಿ ಬೆಂಬಲಿಗರು ಕೋರ್ಟ್ ಹಾಲ್‌ನಲ್ಲಿ ಕಣ್ಣೀರಿಟ್ಟರು. ಪೊಲೀಸ್ ಭದ್ರತೆಯಲ್ಲಿ ಕೋರ್ಟ್ ಹಾಲ್‌ನಿಂದ ಡಿಕೆಶಿ ಹೊರಬರುತ್ತಿದ್ದಂತೆ ಡಿಕೆಶಿ ಕಾಲಿಗೆ ಬೀಳಲು ಬೆಂಬಲಿಗರು ಪ್ರಯತ್ನಿಸಿದಾದರೂ ಪೊಲೀಸರು ಅದಕ್ಕೆ ಅವಕಾಶ ನೀಡಲಿಲ್ಲ. ಈ ಸಂದರ್ಭದಲ್ಲಿ ಬೆಂಬಲಿಗರನ್ನು ಮಾತನಾಡಿಸಿದ ಡಿಕೆಶಿ, "ನನಗೆ ಧೈರ್ಯ ಹೇಳಲು ಬಂದವರು ನೀವೇ ಧೃತಿಗೆಟ್ಟರೇ ಹೇಗೆ," ಎಂದು ಪ್ರಶ್ನಿಸಿದರು. ಡಿಕೆಶಿ ನ್ಯಾಯಾಂಗ ಬಂಧನ ಮಂಗಳವಾರ ಅಂತ್ಯಗೊಳ್ಳುವ ಹಿನ್ನೆಲೆಯಲ್ಲಿ ಅವರ ಬೆಂಬಲಿಗರಲ್ಲಿ ಜಾಮೀನು ಸಿಗುವ ನಿರೀಕ್ಷೆ ಇತ್ತು. ಬೆಂಗಳೂರು, ರಾಮನಗರ ಜಿಲ್ಲೆಗಳಿಂದ ನೂರಾರು ಬೆಂಬಲಿಗರು ಕೋರ್ಟ್ ಹಾಲ್‌ನಲ್ಲಿ ಕಿಕ್ಕಿರಿದು ಸೇರಿದ್ದರು. ಜಾಮೀನು ವಿಸ್ತರಣೆ ಆಗುತ್ತಿದ್ದಂತೆ ನಿರಾಸೆಯಿಂದ ಮರಳಿದರು.

# ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ರಾಜಣ್ಣಗೂ ಇ.ಡಿ ಬುಲಾವ್

■ **ವಿಕ ಸುದ್ದಿಲೋಕ** ತುಮಕೂರು

ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಸೆ.24ರಂದು ಕೊರಿಯರ್ ಮೂಲಕ ನೋಟಿಸ್ ಬಂದಿದೆ ಎಂದು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ, ಮಾಜಿ ಶಾಸಕ ಕೆ.ಎನ್. ರಾಜಣ್ಣ ತಿಳಿಸಿದರು.



ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿ "ಅ.8ರಂದು ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಗಿತ್ತು. ಆದರೆ, ಸೆ.30ರಂದು ಕರೆ ಮಾಡಿ ಅ.8ರಂದು ದಸರಾ ಇರುವುದರಿಂದ ಅ.9ರಂದು ಹಾಜರಾಗುವಂತೆ ಸೂಚಿಸಿದ್ದಾರೆ. ಇ-ಮೇಲ್ ಐಡಿಯನ್ನೂ ಕಳುಹಿಸಿದ್ದಾರೆ," ಎಂದು ತಿಳಿಸಿದರು.

"ಯಾವ ಪ್ರಕರಣ ಮತ್ತು ಯಾವ ದಾಖಲೆ ಸಂಬಂಧ ಎಂಬುದರ ಬಗ್ಗೆ ಅಧಿಕೃತ ಮಾಹಿತಿ ಇಲ್ಲ, ನನ್ನ ಪ್ರಕಾರ ಬೆಳಗಾವಿಯ ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಒಡೆತನದ ಹರ್ಷಾ ಶುಗರ್ಸ್‌ಗೆ ತುಮಕೂರು ಡಿಸಿಸಿ ಬ್ಯಾಂಕ್‌ನಿಂದ 25 ಕೋಟಿ ರೂ. ಸಾಲ ನೀಡಿದ್ದೇವೆ. ಈ ಹಿನ್ನೆಲೆಯಲ್ಲಿ ನೋಟಿಸ್ ಬಂದಿರಬಹುದು," ಎಂದು ಹೇಳಿದರು.

"ಯಾವುದೇ ಸಾಲ ಕೊಡಬೇಕಾದರೂ ದಾಖಲೆಗಳನ್ನು ಪಡೆದು ಸಾಲ ಕೊಡುತ್ತೇವೆ. ಗ್ಯಾರಂಟಿ ಪಡೆದುಕೊಂಡಿರುತ್ತೇವೆ. ಹರ್ಷಾ ಶುಗರ್ಸ್‌ಗೆ ಅಪೆಕ್ಸ್ ಬ್ಯಾಂಕ್ ಲೀಡರ್‌ಶಿಪ್‌ನಲ್ಲಿ ಸಹಕಾರ ಕೊಟ್ಟಿದ್ದೇವೆ. ನಾನಾ ಡಿಸಿಸಿ ಬ್ಯಾಂಕ್‌ನಿಂದ ಸುಮಾರು 300 ಕೋಟಿ ರೂ. ಸಾಲ ನೀಡಲಾಗಿದೆ," ಎಂದರು.

### ಹೆಬ್ಬಾಳ್ಕರ್‌ಗೆ ಕೊಟ್ಟಿರುವ ಸಾಲ ಎಷ್ಟು?

| | |
|---|---|
| ಅಪೆಕ್ಸ್ ಬ್ಯಾಂಕ್ | 100 ಕೋಟಿ ರೂ. |
| ದಕ್ಷಿಣ ಕನ್ನಡ ಬ್ಯಾಂಕ್ | 100 ಕೋಟಿ ರೂ. |
| ತುಮಕೂರು ಡಿಸಿಸಿ ಬ್ಯಾಂಕ್ | 25 ಕೋಟಿ ರೂ. |
| ವಿಜಯಪುರ ಬ್ಯಾಂಕ್ | 10 ಕೋಟಿ ರೂ. |
| ಬಾಗಲಕೋಟೆ ಬ್ಯಾಂಕ್ | 60 ಕೋಟಿ ರೂ. |